All India Radio: Bangalore
National Bulletin In Kannada
17.05.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<><><*><><<>

ಮುಖ್ಯಾಂಶಗಳು

೧. ಪಂಚರಾಷ್ಟ್ರಗಳ ಪ್ರವಾಸದ ಮೂರನೇ ಹಂತದಲ್ಲಿ ಸ್ವಿಡನ್‌ಗೆ ಇಂದು ಪ್ರಧಾನಿ ನರೇಂದ್ರ ಮೋದಿ ಭೇಟಿ

೨. 'ಒಂದು ರಾಷ್ಟ್ರ; ಒಂದು ಚುನಾವಣೆ'; ಸಂಸದ ಪಿ.ಪಿ. ಚೌಧರಿ ಅಧ್ಯಕ್ಷತೆಯ, ಜಂಟಿ ಸಂಸದೀಯ ಸಮಿತಿ, ಬೆಂಗಳೂರಿಗೆ ಭೇಟಿ; ವಿವಿಧ ರಾಜಕೀಯ ಪಕ್ಷಗಳ ನಾಯಕರೊಂದಿಗೆ ಸಂವಾದ

೩. ಚಿನ್ನ ಮತ್ತು ಪ್ಲಾಟಿನಂ ಲೇಪಿತ ಬೆಳ್ಳಿ ಸೇರಿದಂತೆ ಬೆಳ್ಳಿಯ ಆಮದು ನೀತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಉಚಿತದಿಂದ ನಿರ್ಬಂಧಿತಕ್ಕೆ ಪರಿಷ್ಕರಿಸಿದ ಕೇಂದ್ರ ಸರ್ಕಾರ

೪. ಮಧ್ಯಪ್ರದೇಶದ ಭೋಜಶಾಲಾ ಸಂಕೀರ್ಣಕ್ಕೆ ಹಿಂದೂಗಳಿಗೆ ಅನಿಯಂತ್ರಿತ ಪ್ರವೇಶಕ್ಕೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅನಮತಿ

೫. ಐಪಿಎಲ್ ಟಿ-೨೦ ಕ್ರಿಕೆಟ್; ಗುಜರಾತ್ ಟೈಟನ್ಸ್ ವಿರುದ್ಧ ಕೊಲ್ಕತ್ತಾ ನೈಟ್ ರೈಡರ್ಸ್‌ಗೆ ೨೯ ರನ್‌ಗಳ ಜಯ

<><><*><><<>

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಎರಡು ದಿನಗಳ ಸ್ವೀಡನ್ ಭೇಟಿಗಾಗಿ ಗೋಥೆನ್‌ಬರ್ಗ್‌ಗೆ ತಲುಪಲಿದ್ದಾರೆ. ಇದು ಭಾರತ ಮತ್ತು ಸ್ವೀಡನ್ ನಡುವಿನ ಆಳವಾದ ಮೈತ್ರಿಯಲ್ಲಿ ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ವ್ಯಾಪ್ತಿಯನ್ನು ಪರಿಶೀಲಿಸಲು ಮತ್ತು ಹಸಿರು ಪರಿವರ್ತನೆ, ಕೃತಕಬುದ್ಧಿಮತ್ತೆ, ಉದಯೋನ್ಮುಖ ತಂತ್ರಜ್ಞಾನಗಳು, ನವೋದ್ಯಮಗಳು, ಸ್ಥಿತಿಸ್ಥಾಪಕ ಪೂರೈಕೆ ಸರಪಳಿಗಳು, ರಕ್ಷಣೆ, ಬಾಹ್ಯಾಕಾಶ, ಹವಾಮಾನ ಪ್ರಕ್ರಿಯೆ ಮತ್ತು ಸಹಯೋಗದೊಂದಿಗೆ ದ್ವಿಪಕ್ಷೀಯ ವ್ಯಾಪಾರವನ್ನು ಹೆಚ್ಚಿಸಲು ಸಹಕಾರದ ನೂತನ ಮಾರ್ಗಗಳನ್ನು ಅನ್ವೇಷಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸ್ವೀಡಿಷ್ ಪ್ರಧಾನಿ ಉಲ್ಫ್ ಕ್ರಿಸ್ಟರ್ಸನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಿದ್ದಾರೆ. ಉಭಯ ನಾಯಕರು, ಯುರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಅವರೊಂದಿಗೆ ಪ್ರಮುಖ ಪ್ಯಾನ್-ಯುರೋಪಿಯನ್ ವ್ಯಾಪಾರ ನಾಯಕರ ವೇದಿಕೆಯಾದ ಯುರೋಪಿಯನ್ ರೌಂಡ್ ಟೇಬಲ್ ಫಾರ್ ಇಂಡಸ್ಟ್ರಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಪ್ರಸ್ತುತ, ೨೮೦ ಕ್ಕೂ ಹೆಚ್ಚು ಸ್ವೀಡಿಷ್ ಕಂಪನಿಗಳು ಭಾರತದಲ್ಲಿ

ಕಾರ್ಯನಿರ್ವಹಿಸುತ್ತಿದ್ದರೆ, ೭೫ ಭಾರತೀಯ ಸಂಸ್ಥೆಗಳು ಸ್ವೀಡನ್‌ನಲ್ಲಿ ತಮ್ಮ ನೆಲೆ ಕಂಡುಕೊಂಡಿವೆ. ಯುರೋಪಿಯನ್ ಆಯೋಗದ ಅಧ್ಯಕ್ಷರೊಂದಿಗೆ ಪ್ರಧಾನ ಮಂತ್ರಿಗಳು ಉದ್ಯಮ ಕ್ಷೇತ್ರಕ್ಕೆ ಸಂಬಂಧಟ್ಟಂತೆ ಯುರೋಪಿಯನ್ ರೌಂಡ್ ಟೇಬಲ್‌ಗೆ ಜಂಟಿ ಭಾಷಣ ಮಾಡುವುದು ಈ ಭೇಟಿಯ ವಿಶಿಷ್ಟ ಪ್ರಮುಖ ಅಂಶವಾಗಿದೆ. ರಕ್ಷಣಾ ಮತ್ತು ಭದ್ರತಾ ಸಹಕಾರವು ಕೈಗಾರಿಕಾ ಏಕೀಕರಣದತ್ತ ಸಾಗುವ ಕೇಂದ್ರ ಸ್ತಂಭವಾಗಿ ವಿಕಸನಗೊಂಡಿದೆ.  ಕೊನೆಯಲ್ಲಿ, ಗೋಥೆನ್‌ಬರ್ಗ್‌ಗೆ ಪ್ರಧಾನ ಮಂತ್ರಿಯವರ ಭೇಟಿಯು ಐತಿಹಾಸಿಕ ಮಹತ್ವವನ್ನು ಪಡೆಯಲಿದೆ. ಹಸಿರು ಪರಿವರ್ತನೆ, ಕೃತಕಬುದ್ಧಿಮತ್ತೆ ಮತ್ತು ರಕ್ಷಣಾ ವಲಯದ ಏಕೀಕರಣದ ಮೇಲೆ ಕೇಂದ್ರೀಕರಿಸುವ ಮೂಲಕ, ಭಾರತ ಮತ್ತು ಸ್ವೀಡನ್ ಜಾಗತಿಕ ಅನಿಶ್ಚಿತತೆಯ ಅವಧಿಯಲ್ಲಿ ಉತ್ತರ-ದಕ್ಷಿಣ ಸಹಕಾರಕ್ಕೆ ಒಂದು ಹೆಗ್ಗುರುತಾಗಲಿದೆ.

<>><><*><><<>

ಪ್ರಧಾನಿ ನರೇಂದ್ರ ಮೋದಿ ಅವರು ನೆದರ್ಲ್ಯಾಂಡ್ಸ್ ಭೇಟಿಯ ಎರಡನೇ ದಿನವಾದ ನಿನ್ನೆ ಸಮುದಾಯದ ಸಂವಹನದಿಂದ ಹಿಡಿದು ಡಚ್ ರಾಜಮನೆತನದೊಂದಿಗಿನ ಸಭೆಯವರೆಗೆ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು. ಪ್ರಧಾನಿ ನರೇಂದ್ರ ಮೋದಿ ಮತ್ತು ನೆದರ್ಲ್ಯಾಂಡ್ಸ್ ಪ್ರಧಾನಿ ಚೋಳ ಯುಗದ ತಾಮ್ರ ಫಲಕಗಳ ಐತಿಹಾಸಿಕ ಪುನಃಸ್ಥಾಪನೆಗೆ ಸಾಕ್ಷಿಯಾದರು. ಕಲಾಕೃತಿಗಳಿಗಿಂತ ಹೆಚ್ಚಾಗಿ, ಈ ಫಲಕಗಳು ಭಾರತದ ಪರಂಪರೆ ಮತ್ತು ನಾಗರಿಕತೆಯ ಅಮೂಲ್ಯವಾದ ಅಧ್ಯಾಯವನ್ನು ಪ್ರತಿನಿಧಿಸುತ್ತವೆ ಮತ್ತು ಅವುಗಳ ಸ್ವದೇಶಕ್ಕೆ ಮರಳುವಿಕೆಯು ಭಾರತದ ಜನರಿಗೆ ಆಳವಾದ ಭಾವನಾತ್ಮಕ ಮಹತ್ವವನ್ನು ಹೊಂದಿದೆ. ಭಾರತದ ಅರೆವಾಹಕ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ಟಾಟಾ ಎಲೆಕ್ಟ್ರಾನಿಕ್ಸ್ ಸೆಮಿಕಂಡಕ್ಟರ್ ಮುಂಚೂಣಿಯಲ್ಲಿರುವ ಎಎಸ್‌ಎಂಎಲ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತು. ಎಂಒಯು ಅಡಿಯಲ್ಲಿ, ಗುಜರಾತ್‌ನ ಧೋಲೆರಾದಲ್ಲಿ ಟಾಟಾ ಎಲೆಕ್ಟ್ರಾನಿಕ್ಸ್‌ನ ಸೆಮಿಕಂಡಕ್ಟರ್ ಸೌಲಭ್ಯದ ಸ್ಥಾಪನೆ ಮತ್ತು ವಿಸ್ತರಣೆಯನ್ನು ಎಎಸ್‌ಎಂಎಲ್ ಬೆಂಬಲಿಸುತ್ತದೆ.  ಉಭಯ ನಾಯಕರು ಇಂಧನ, ಬಂದರುಗಳು, ಆರೋಗ್ಯ, ಕೃಷಿ, ವ್ಯಾಪಾರ ಮತ್ತು ತಂತ್ರಜ್ಞಾನದ ಪ್ರಮುಖ ಡಚ್ ಕಂಪನಿಗಳ ಸಿಇಒಗಳೊಂದಿಗೆ ಜಂಟಿಯಾಗಿ ಸಂವಹನ ನಡೆಸಿದರು.

<>><><*><><<>

’ಒಂದು ರಾಷ್ಟ್ರ ಒಂದು ಚುನಾವಣೆ’ ಕುರಿತು ಜಂಟಿ ಸಂಸದೀಯ ಅಧ್ಯಯನ ಸಮಿತಿ ಬೆಂಗಳೂರಿಗೆ ಆಗಮಿಸಿದ್ದು, ನಿನ್ನೆ ಜನಪ್ರತಿನಿಧಿಗಳು ಹಾಗೂ ವಿವಿಧ ರಾಜಕೀಯ ಪಕ್ಷಗಳ ನಾಯಕರೊಂದಿಗೆ ಸಂವಾದ ನಡೆಸಿತು. ಜೆಪಿಸಿ ಸಮಿತಿ ಎಲ್ಲಾ ಪಕ್ಷಗಳ ಅಭಿಪ್ರಾಯ ಸಂಗ್ರಹಣೆಯಲ್ಲಿ ನಿರತವಾಗಿದ್ದು, ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳನ್ನು ಒಟ್ಟಿಗೆ ನಡೆಸುವ ಕೇಂದ್ರ ಸರ್ಕಾರ ಯೋಜನೆಗೆ ಮಾಹಿತಿ ಸಂಗ್ರಹಣೆ ಮಾಡುತ್ತಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಪಿಸಿ ಸಮಿತಿ ಅಧ್ಯಕ್ಷರಾದ ಪಿ.ಪಿ.ಚೌಧರಿ, ೧೯೭೭ರಲ್ಲಿ ತುರ್ತು ಪರಿಸ್ಥಿತಿ ಕಾರಣದಿಂದಾಗಿ ಈ ಪ್ರಕ್ರಿಯೆಯಲ್ಲಿ ಬದಲಾವಣೆಯಾಗಿತ್ತು ಎಂದು

ತಿಳಿಸಿದ್ದಾರೆ. ನೀತಿ ಆಯೋಗ, ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರದ ಆಶಯದಂತೆ ಎರಡೂ ಚುನಾವಣೆಗಳನ್ನು ದೇಶಾದ್ಯಂತ ಒಟ್ಟಿಗೆ ನಡೆಸುವುದು ದೇಶದ ಜನರ ಹಾಗೂ ದೇಶದ ಹಿತಾಸಕ್ತಿಗೆ ಒತ್ತು ನೀಡುತ್ತದೆ ಎಂದು ಅವರು ತಿಳಿಸಿದರು. ಈ ನಿಟ್ಟಿನಲ್ಲಿ ಜೆಪಿಸಿ ಸಮಿತಿ ಅಧ್ಯಯನ ನಡೆಸುತ್ತಿದೆ. ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ಸೇರಿದಂತೆ ಅನೇಕ ಹಿರಿಯರು ಮತ್ತು ಗಣ್ಯರ ಜೊತೆ ಈಗಾಗಲೇ ಚರ್ಚೆ ನಡೆದಿದೆ. ಅನೇಕ ನ್ಯಾಯಾಧೀಶರಿಂದ ಅಭಿಪ್ರಾಯ ಸಂಗ್ರಹಣೆ ಮಾಡಲಾಗಿದೆ. ವಿವಿಧ ರಾಜ್ಯಗಳಿಗೆ ತೆರಳಿ ಸಮಿತಿ ವಿವಿಧ ರಾಜಕೀಯ ಪಕ್ಷಗಳಿಂದ ಮಾಹಿತಿಯನ್ನು ಸಂಗ್ರಹಿಸಿದೆ. ಚುನಾವಣೆ ಒಂದೇ ಸಂದರ್ಭದಲ್ಲಿ ನಡೆಯುವುದರಿಂದ ೭ ಲಕ್ಷ ಕೋಟಿ ರೂಪಾಯಿ ಹಣ ಮತ್ತು ಮಾನವ ಸಂಪನ್ಮೂಲ ಉಳಿತಾಯವಾಗಲಿದೆ. ಶಾಲಾ ಕಾಲೇಜು ಮಕ್ಕಳಿಗೆ ಪದೇ ಪದೇ ಅಡಚಣೆ ಆಗುವುದಕ್ಕೂ ಕೂಡ ತಡೆಯೊಡ್ಡಿದ್ದಂತಾಗುತ್ತದೆ ಎಂದು ಜೆಪಿಸಿ ಸಮಿತಿ ಅಧ್ಯಕ್ಷ ಪಿ.ಪಿ.ಚೌಧರಿ ತಿಳಿಸಿದ್ದಾರೆ. ಸಂವಾದದಲ್ಲಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಸಚಿವರಾದ ಎಚ್.ಕೆ.ಪಾಟೀಲ್, ಪ್ರಿಯಾಂಕ್ ಖರ್ಗೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭಾಗವಹಿಸಿದ್ದರು.

<>><><*><><<>

ಅಮೂಲ್ಯ ಲೋಹಗಳ ಮೇಲೆ ಹೆಚ್ಚಿನ ಆಮದು ಸುಂಕ ವಿಧಿಸಿದ ಕೆಲವೇ ದಿನಗಳಲ್ಲಿ, ಕೇಂದ್ರ ಸರ್ಕಾರ ಬೆಳ್ಳಿಯ ಮೇಲೆ ಆಮದು ನಿರ್ಬಂಧಗಳನ್ನು ವಿಧಿಸಿದೆ. ವಿದೇಶಿ ವ್ಯಾಪಾರ ನಿರ್ದೇಶನಾಲಯವು, ಅಧಿಸೂಚನೆಯಲ್ಲಿ, ಚಿನ್ನ ಮತ್ತು ಪ್ಲಾಟಿನಂ ಲೇಪಿತ ಬೆಳ್ಳಿ ಸೇರಿದಂತೆ ಬೆಳ್ಳಿಯ ಆಮದು ನೀತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಉಚಿತದಿಂದ ನಿರ್ಬಂಧಿತಕ್ಕೆ ಪರಿಷ್ಕರಿಸಲಾಗಿದೆ ಎಂದು ತಿಳಿಸಿದೆ. ಸರ್ಕಾರ ಅಮೂಲ್ಯ ಲೋಹಗಳ ಮೇಲಿನ ಆಮದು ಸುಂಕವನ್ನು ಶೇಕಡಾ ಆರರಿಂದ ಶೇಕಡಾ ೧೫ ಕ್ಕೆ ಹೆಚ್ಚಿಸಿದೆ. ನಿರ್ಬಂಧಿತ ವರ್ಗದ ಸರಕುಗಳಿಗೆ ಆಮದು ಮಾಡಿಕೊಳ್ಳಲು ಸರ್ಕಾರದ ಪರವಾನಗಿ ಅಗತ್ಯವಿದೆ.

<>><><*><><<>

ಮಧ್ಯಪ್ರದೇಶದ ಧಾರ್ ಜಿಲ್ಲೆಯ ಭೋಜಶಾಲಾ ಸಂಕೀರ್ಣದಲ್ಲಿರುವ ಸ್ಮಾರಕಕ್ಕೆ ಪೂಜೆ ಮತ್ತು ಇತರ ಧಾರ್ಮಿಕ ಉದ್ದೇಶಗಳಿಗಾಗಿ ಹಿಂದೂಗಳಿಗೆ ಅನಿಯಂತ್ರಿತ ಪ್ರವೇಶವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ-ಎಎಸ್ಐ ನೀಡಿದೆ. ಧಾರ್‌ನಲ್ಲಿರುವ ಭೋಜಶಾಲಾ ಸರಸ್ವತಿಯ ದೇವಾಲಯ ಎಂದು ಮಧ್ಯಪ್ರದೇಶ ಹೈಕೋರ್ಟ್ ತೀರ್ಪು ನೀಡಿದ ನಂತರ ಎಎಸ್ಐ ಈ ನಿರ್ಧಾರ ತೆಗೆದುಕೊಂಡಿದೆ. ಎಎಸ್ಐ ಆದೇಶವನ್ನು ಉಲ್ಲೇಖಿಸಿ, ಭೋಜಶಾಲಾ ದೇವಾಲಯದ ಜೊತೆಗೆ ಸಂಸ್ಕೃತ ಭಾಷೆ, ವ್ಯಾಕರಣ ಮತ್ತು ಸಾಹಿತ್ಯದ ಕಲಿಕೆ ಮತ್ತು ಸಂಶೋಧನೆಯ ಕೇಂದ್ರವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶುಕ್ರವಾರದ ಮೊದಲು, ಮಧ್ಯಪ್ರದೇಶ ಹೈಕೋರ್ಟ್ ಧಾರ್ ಜಿಲ್ಲೆಯಲ್ಲಿರುವ ಭೋಜಶಾಲಾ

ಸಂಕೀರ್ಣವು ಸರಸ್ವತಿ ದೇವಿಗೆ ಮೀಸಲಾಗಿರುವ ದೇವಾಲಯವಾಗಿದೆ ಮತ್ತು ಕೇಂದ್ರ ಮತ್ತು ಎಎಸ್ಐ ಅದರ ಆಡಳಿತ ಮತ್ತು ನಿರ್ವಹಣೆಯನ್ನು ನಿರ್ಧರಿಸಬಹುದು ಎಂದು ಘೋಷಿಸಿತ್ತು.

<>><><*><><<>

ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ, ಕೊಲ್ಕತ್ತಾ ನೈಟ್ ರೈಡರ್ಸ್ ತಂಡ ಗುಜರಾತ್ ಟೈಟಾನ್ಸ್ ವಿರುದ್ಧ ೨೯ ರನ್‌ಗಳ ಜಯ ಸಾಧಿಸಿದೆ. ಮೊದಲು ಬ್ಯಾಟ್ ಮಾಡಿದ ಕೊಲ್ಕತ್ತಾ ನಿಗದಿತ ೨೦ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೨೪೭ ರನ್ ಗಳಿಸಿತು.ಕೊಲ್ಕತ್ತಾ ಪರ ಫಿನ್ ಆಲೆನ್ ೯೩, ಅಂಗ್‌ಕ್ರಿಶ್ ರಘುವಂಶಿ ೮೨, ಕ್ಯಾಮೆರೂನ್ ಗ್ರೀನ್ ೫೨ ರನ್ ಗಳಿಸಿದರು. ಬೃಹತ್ ಗುರಿ ಬೆನ್ನತ್ತಿದ ಗುಜರಾತ್ ೨೦ ಓವರ್‌ಗಳಲ್ಲಿ ೪ ವಿಕೆಟ್ ಕಳೆದುಕೊಂಡು ೨೧೮ ರನ್ ಗಳಿಸುವುದರೊಂದಿಗೆ ಸೋಲೊಪ್ಪಿಕೊಂಡಿತು. ಕೊಲ್ಕತ್ತಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಸುನೀಲ್ ನರೈನ್, ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿಂದು ಎರಡು ಪಂದ್ಯಗಳು ನಡೆಯಲಿದ್ದು, ಧರ್ಮಶಾಲಾದಲ್ಲಿ ನಡೆಯುವ ಮೊದಲ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿವೆ. ಪಂಂದ್ಯ ಮಧ್ಯಾಹ್ನ ೩.೩೦ ಕ್ಕೆ ಆರಂಭವಾಗಲಿದೆ. ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುವ ದಿನದ ಎರಡನೇ ಪಂದ್ಯದಲ್ಲಿ, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ರಾಜಸ್ತಾನ ರಾಯಲ್ಸ್ ತಂಡಗಳು ಸೆಣೆಸಲಿವೆ. ಪಂದ್ಯ ರಾತ್ರಿ ೭.೩೦ ಕ್ಕ ಆರಂಭವಾಗಲಿದೆ.

<>><><*><><<>

ಬ್ಯಾಡ್ಮಿಂಟನ್‌ನಲ್ಲಿ, ಭಾರತದ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಇಂದು ಬ್ಯಾಂಕಾಕ್‌ನಲ್ಲಿ ನಡೆಯಲಿರುವ ಥೈಲ್ಯಾಂಡ್ ಓಪನ್‌ನ ಪುರುಷರ ಡಬಲ್ಸ್ ಫೈನಲ್‌ನಲ್ಲಿ ಇಂಡೋನೇಷ್ಯಾದ ಜೋಡಿ ಲಿಯೋ ರೋಲಿ ಕಾರ್ನಾಂಡೋ ಮತ್ತು ಡೇನಿಯಲ್ ಮಾರ್ಥಿನ್ ಅವರನ್ನು ಎದುರಿಸಲಿದ್ದಾರೆ.

ಇದಕ್ಕೂ ಮೊದಲು, ನಿನ್ನೆ ನಡೆದ ಸೆಮಿಫೈನಲ್‌ನಲ್ಲಿ ಮಲೇಷ್ಯಾದ ಗೋ ಸ್ಜೆ ಫೀ ಮತ್ತು ನೂರ್ ಇಝುದ್ದೀನ್ ಅವರನ್ನು ೧೯-೨೧, ೨೨-೨೦, ೨೧-೧೬ ಅಂತರದಿಂದ ಸೋಲಿಸುವ ಮೂಲಕ ಭಾರತೀಯ ಜೋಡಿ ಪುರುಷರ ಡಬಲ್ಸ್ ಫೈನಲ್‌ಗೆ ಪ್ರವೇಶಿಸಿತು.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>